## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 761 (845)

ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀದರರ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 19.08.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | 2024-25ರ ಆಯವ್ಯಯದಲ್ಲಿ ಘೋಷಣೆ ಮಾಡಿದಂತೆ ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ "ಕಿಸಾನ್ ಮಾಲ್" ಗಳನ್ನು ತೆರೆಯಲಾಗಿದೆಯೇ; ಎಲ್ಲೆಲ್ಲಿ ಕಾರ್ಯಾರಂಭ ಮಾಡಿವೆ; (ವಿವರ ನೀಡುವುದು) | ಹೌದು, 2024-25ರ ಆಯವ್ಯಯದಲ್ಲಿ ಘೋಷಣೆ ಮಾಡಿದಂತೆ ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ "ಕಿಸಾನ್ ಮಾಲ್" ಗಳನ್ನು ತೆರೆಯಲಾಗಿದೆ.<br><br>ಉತ್ಕೃಷ್ಟ ಕೇಂದ್ರ ಮದ್ದೂರು, ಮಂಡ್ಯ ಜಿಲ್ಲೆ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಕಾರ್ಯಾರಂಭಗೊಂಡಿರುತ್ತವೆ. |
| ಆ | ಕಿಸಾನ್ ಮಾಲ್‌ಗಳ ಉದ್ದೇಶವೇನು: ರೈತ ಉತ್ಪಾದಕ ಸಂಸ್ಥೆಗಳ (ಎಫ್ ಪಿ ಒ) ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಅನುಷ್ಠಾನ ಪಡಿಸಲಾಗುತ್ತಿದೆಯೇ, ಹಾಗಿದ್ದರೆ ಸ್ಥಳೀಯವಾಗಿ ಗುರುತಿಸಿರುವ ಎಫ್ ಪಿಒಗಳು ಯಾವವು; (ವಿವರ ನೀಡುವುದು) | ಕಿಸಾನ್ ಮಾಲ್‌ಗಳ ಉದ್ದೇಶಗಳು ಈ ಕೆಳಕಂಡಂತಿವೆ:<br><br>1) ಕಿಸಾನ್ ಮಾಲ್ ಕೇಂದ್ರಗಳಲ್ಲಿ ತೋಟಗಾರಿಕೆಯ ಮೂಲ ಅವಶ್ಯಕ ಪರಿಕರಗಳಾದ ಬೀಜ, ಕಸಿ/ಸಸಿ ಗಿಡಗಳು, ಸಸ್ಯ ಪೋಷಕಾಂಶ/ ರಸಗೊಬ್ಬರಗಳು, ಬೆಳೆ ಹಾರ್ಮೋನುಗಳು, ರಾಸಾಯನಿಕ ಪೀಡೆನಾಶಕಗಳು, ಜೈವಿಕ ಗೊಬ್ಬರ ಮತ್ತು ಪೀಡೆನಾಶಕಗಳು, ಎರೆಹುಳು ಮತ್ತಿತರೆ ಗೊಬ್ಬರಗಳು, ಕೃಷಿ ಪರಿಕರಗಳು ಇತ್ಯಾದಿಗಳನ್ನು ಒಂದೇ ಸೂರಿನಡಿ ಬೆಳೆಗಾರರಿಗೆ ದೊರಕುವಂತೆ ವ್ಯವಸ್ಥೆ ಕಲ್ಪಿಸುವುದು.<br><br>2) ವಿವಿಧ ಬೆಳೆಗಳ ಕೃಷಿಯ ಕುರಿತು ಸೂಕ್ತ ತಾಂತ್ರಿಕ ಸಲಹೆಗಳನ್ನು ಬೆಳೆಗಾರರಿಗೆ ಒದಗಿಸುವ ಸೌಕರ್ಯ ಕಲ್ಪಿಸುವುದು.<br><br>3) ಶೈಕ್ಷಣಿಕ ಪರಿಣಿತಿ ಹಾಗೂ ವೃತ್ತಿಪರ ಅನುಭವದ ಆಧಾರದ ಮೇಲೆ ಮತ್ತು ತೋಟಗಾರಿಕೆ/ ಬೇಸಾಯಶಾಸ್ತ್ರ/ ಸಸ್ಯ ರೋಗಶಾಸ್ತ್ರ/ ಸಸ್ಯ ಕೀಟಶಾಸ್ತ್ರ/ ಮಣ್ಣು ವಿಜ್ಞಾನ ಮೊದಲಾದ ವಿಷಯ ತಜ್ಞರೊಂದಿಗೆ ನಿರಂತರ ಸಂಪರ್ಕ ಸಾಧಿಸಿ, ಬೆಳೆಗಾರರಿಗೆ ಪೋಷಕಾಂಶ/ವಿವಿಧ ಕೀಟ ಮತ್ತು ರೋಗಗಳ ನಿರ್ವಹಣೆ ಮತ್ತಿತರೆ ಕೃಷಿ ಸಂಬಂಧಿತ ವಿಷಯಗಳ ಕುರಿತು ಸೂಕ್ತ ಸಲಹೆಗಳನ್ನು ಒದಗಿಸುವುದು.<br><br>4) ಉತ್ಪನ್ನಗಳ ಮಾರಾಟಕ್ಕೆ ಸೂಕ್ತ ಮಾರ್ಗಗಳ ಕುರಿತು ರೈತರಿಗೆ ಸಲಹೆ ನೀಡುವುದು.<br><br>5) ವಿವಿಧ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು, NHB, NHM, NCDC, APEDA, MFPI ಸೇರಿದಂತೆ ರಾಜ್ಯದ ಇಲಾಖೆಗಳಿಂದ ಸಹಾಯಧನ ಆಧಾರಿತ ವಿವಿಧ ಸವಲತ್ತುಗಳನ್ನು ಪಡೆಯಲು ಅಗತ್ಯವಿರುವ |

ಯೋಜನಾ ವರದಿ/ಅರ್ಜಿ ಇತ್ಯಾದಿಗಳನ್ನು ಬೆಳೆಗಾರರಿಗೆ ಸಿದ್ಧಪಡಿಸಿ ಒದಗಿಸುವ ಸೇವೆ.

6) ತೋಟಗಾರಿಕೆ ಇಲಾಖೆಯ ವಿವಿಧ ನರ್ಸರಿಗಳು, ಕೃಷಿ/ತೋಟಗಾರಿಕೆ ವಿಶ್ವವಿದ್ಯಾಲಯಗಳ/ IIHR ನಂತಹ ಕೇಂದ್ರ ಸರ್ಕಾರದ ಸಂಸ್ಥೆಗಳ/ ಖಾಸಗಿ ಸಂಸ್ಥೆಗಳ ನರ್ಸರಿಗಳಲ್ಲಿ ಉತ್ತಮ ಗುಣಮಟ್ಟದ ಬೀಜ/ ಸಸಿಗಳ ಲಭ್ಯತೆ ಕುರಿತು ಬೆಳೆಗಾರರಿಗೆ ಸೂಕ್ತ ಮಾಹಿತಿ/ ಸಲಹೆ ಒದಗಿಸುವುದು.

ರೈತ ಉತ್ಪಾದಕ ಸಂಸ್ಥೆಗಳ (ಎಫ್ ಪಿ ಒ) ಸಹಭಾಗಿತ್ವದಲ್ಲಿ ಕಿಸಾನ್ ಮಾಲ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕಿಸಾನ್ ಮಾಲ್ ಗಳ ಕಾರ್ಯಾಚರಣೆ ಹಾಗೂ ನಿರ್ವಹಣೆಗಾಗಿ ಸ್ಥಳೀಯವಾಗಿ ಗುರುತಿಸಿರುವ ಎಫ್ ಪಿ ಒ ಗಳು ಈ ಕೆಳಗಿನಂತಿವೆ:

| ಕ್ರ ಸಂ | ಕೇಂದ್ರ | ಎಫ್ ಪಿ ಒ |
|---|---|---|
| 1 | ಉತ್ಕೃಷ್ಟ ಕೇಂದ್ರ ಮದ್ದೂರು | ಬಸರಾಳು ರೈತ ಉತ್ಪಾದಕ ಸಂಸ್ಥೆ |
| 2 | ಉತ್ಕೃಷ್ಟ ಕೇಂದ್ರ ಧಾರವಾಡ | ಉಳುವಯೋಗಿ ತೋಟಗಾರಿಕೆ ಬೆಳೆಗಾರರ FPC(ರಿ), ಹುಬ್ಬಳ್ಳಿ |
| 3 | ಬಾಗಲಕೋಟೆ | ಹುನಗುಂದ ತೋಟಗಾರಿಕೆ ರೈತ ಉತ್ಪಾದಕ ಸಂಸ್ಥೆ, ಸೂಳಿಬಾವಿ |
| 4 | ದಾವಣಗೆರೆ | ಭೂಮಾತಾ ರೈತ ಉತ್ಪಾದಕರ ಸಂಸ್ಥೆ, ನಾಗನೂರು |
| 5 | ಮೈಸೂರು | ವರುಣ ತೋಟಗಾರಿಕೆ ರೈತ ಉತ್ಪಾದಕ ಸಂಸ್ಥೆ, ವರುಣ ಗ್ರಾಮ, ಮೈಸೂರು ಈ ಸಂಸ್ಥೆಯು ಆಸಕ್ತಿ ವ್ಯಕ್ತಪಡಿಸಿದ್ದು, ಆಯ್ಕೆ ಪ್ರಗತಿಯಲ್ಲಿರುತ್ತದೆ. |

ಇ ಪ್ರತಿ ಕಿಸಾನ್ ಮಾಲ್ ಗಳನ್ನು ತೆರೆಯಲು ಒದಗಿಸಲಾಗಿರುವ ಅನುದಾನ ಎಷ್ಟು; ಈ ಅನುದಾನವನ್ನು ಯಾವ್ಯಾವ ವೆಚ್ಚಗಳಿಗೆ ಭರಿಸಲಾಗುತ್ತದೆ; (ವಿವರ ನೀಡುವುದು)

ಕಿಸಾನ್ ಮಾಲ್ ಕೇಂದ್ರಗಳನ್ನು ತೆರೆಯಲು ಒದಗಿಸಿರುವ ಅನುದಾನ ಮತ್ತು ವೆಚ್ಚದ ವಿವರ ಈ ಕೆಳಕಂಡಂತಿದೆ:

| ಕ್ರ ಸಂ | ಕಿಸಾನ್ ಮಾಲ್ ಕೇಂದ್ರ | ಅನುದಾನ (ರೂ. ಲಕ್ಷಗಳಲ್ಲಿ) | ವಿವರ |
|---|---|---|---|
| 1 | ಬಾಗಲಕೋಟೆ | 15.00 | ಮೂಲಭೂತ ಸೌಕರ್ಯಗಳಾದ ಕಟ್ಟಡ ನಿರ್ಮಾಣ/ ನವೀಕರಣ ಕಾಮಗಾರಿ, ವಿದ್ಯುದ್ದೀಕರಣ, |
| 2 | ದಾವಣಗೆರೆ | 18.35 | |
| 3 | ಮೈಸೂರು | 25.00 | |
| 4 | ಉತ್ಕೃಷ್ಟ ಕೇಂದ್ರ, ಧಾರವಾಡ | 15.00 | |

| | | | | | | |
|---|---|---|---|---|---|---|
| | | 5 | ಉತ್ಕೃಷ್ಟ ಕೇಂದ್ರ, ಮದ್ದೂರು | 21.65 | ಬಣ್ಣ ಬಳೆಯುವುದು, ಕಿಟಕಿ ಬಾಗಿಲುಗಳ ದುರಸ್ತಿ, ಒಳಾಂಗಣ ವಿನ್ಯಾಸ, ಸಸ್ಯ ಸಂರಕ್ಷಣಾ ಹಾಗೂ ಇತರೆ ಪರಿಕರಗಳನ್ನು ಪ್ರದರ್ಶನಗೊಳಿಸಲು Rack ಗಳನ್ನು ಖರೀದಿಸಲು ವೆಚ್ಚ ಭರಿಸಲಾಗಿರುತ್ತದೆ. | |
| ಈ | ತೋಟಗಾರಿಕೆ ಬೆಳೆಗಾರರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ರಾಜ್ಯದಾದ್ಯಂತ ಕಿಸಾನ್ ಮಾಲ್ ಗಳನ್ನು ತೆರೆಯಲು ಸರ್ಕಾರ ಉದ್ದೇಶಿಸಿದೆಯೇ; ಹಾಗಿದ್ದಲ್ಲಿ ಎಲ್ಲೆಲ್ಲಿ ತೆರೆಯಲಾಗಿದೆ? (ವಿವರ ನೀಡುವುದು) | ಉದ್ದೇಶಿಸಲಾಗಿದೆ.<br><br>ಮೊದಲ ಹಂತದಲ್ಲಿ ಉತ್ಕೃಷ್ಟ ಕೇಂದ್ರ ಮದ್ದೂರು, ಮಂಡ್ಯ ಜಿಲ್ಲೆ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ತೆರೆಯಲಾಗಿದೆ. ಮೈಸೂರು, ದಾವಣಗೆರೆ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕಾರ್ಯ ಪ್ರಗತಿಯಲ್ಲಿದೆ. | | | | |

ಸಂಖ್ಯೆ: HORTI 359 HGM 2025

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು